ಈ) ನರಭಕ್ಷಕ ಚಿರತೆಯನ್ನು ಹಿಡಿಯವ: ಕೊಲ್ಲುವ ಪ್ರಯತ್ನದಲ್ಲಿ ಅರಣ್ಯ ಸಿಬ್ಬಂದಿ ಹಾಗೂ ಪರಿಣಿತ ತಂಡದವರು ಹಗಲು–ರಾತ್ರಿ ಎನ್ನದೆ 1995 ರಿಂದ ಇಲ್ಲಿಯತನಕ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಮಗ್ನರಾಗಿರುತ್ತಾರೆ. ಸಾರ್ವಜನಿಕರು ಸಹ ಈ ಕಾರ್ಯದಲ್ಲಿ ಶ್ರಮವಹಿಸಿ ಇಲಾಖೆಯೊಂದಿಗೆ ಸಹಕರಿಸುತ್ತಿದ್ದಾರೆ. ಚಿರತೆಗಳನ್ನು ಜೀವಂತವಾಗಿ ಹಿಡಿಯುವ ಬಗ್ಗೆ ಅವುಗಳ ಚಲನವಲನದ ಹಾದಿ ಬದಿಯಲ್ಲಿ ಬೋನುಗಳನ್ನು ಇಡಲಾಗಿದೆ ಹಾಗೂ ನರಭಕ್ಷಕ ಚಿರತೆಯಿಂದ ಪಾರಾಗುವ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಮಾಹಿತಿಗಳನ್ನು ಅರಣ್ಯ ಇಲಾಖೆಯ ಮುಖಾಂ ತರ ಮುದ್ರಿಸಿ ಚಿರತೆ ಹಾವಳಿಯಿರುವ ಹಳ್ಳಿಗಳಲ್ಲಿ ಹಂಚಲಾಗಿರುತ್ತದೆ.

ವಿಷಯ:- ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಖರೀದಿಸಿದ ಔಷಧಿಗಳು.

1340 (2245) **ಶ್ರೀ।। ಶ್ರೀಕಾಂತ ಅಂಬಡಗಟ್ಟಿ (ಧಾರವಾಡ ಗ್ರಾಮಾಂತರ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ವತಿಯಿಂದ ಕಳೆದ 3 ವರ್ಷಗಳಿಂದ ಖರೀದಿಸಿದ ಔಷಧಿಗಳೆಷ್ಟು? ಅವುಗಳಲ್ಲಿ ಕಳಪೆ ಗುಣಮಟ್ಟದ ಔಷಧಿಗಳನ್ನು ತಿರಸ್ಕರಿಸಿ ಕ್ರಮ ಕೈಗೊಳ್ಳಲಾಗಿರುವ ಬಗ್ಗೆ ವಿವರ ನೀಡುವುದು?

ಆ) ರಾಜ್ಯದ ಅನೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಇಲಾಖೆಯ ವತಿಯಿಂದ ಖರೀದಿಸಲಾದ ಔಷಧಿಗಳನ್ನು ವೈದ್ಯರು ಗುಣಮಟ್ಟ ಸರಿ ಇಲ್ಲದಿರುವ ವಿಷಯವನ್ನು ಸರ್ಕಾರದವರ ಗಮನಕ್ಕೆ ತರಲಾಗಿದೆಯೇ? ಹಾಗಿದ್ದರೆ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಕಳಪೆ ಗುಣಮಟ್ಟದ ಔಷಧಿಗಳನ್ನು ಸರಬರಾಜು ಮಾಡಿರುವ ಕಂಪನಿಗಳಾವುವು? ಹಾಗೂ ಎಷ್ಟು ಮೊತ್ತದ ಹಣದ ಔಷಧಿಯನ್ನು ಸರಬರಾಜು ಮಾಡಿರುತ್ತಾರೆ; ಈ ಬಗ್ಗೆ ಇಲಾಖೆಯವರು ತೆಗೆದುಕೊಂಡ ಕ್ರಮಗಳಾವುವು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಕಳೆದ ಮೂರು ವರ್ಷಗಳ ಸಾಲಿನಲ್ಲಿ ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರು ಇಲ್ಲಿಗೆ ಬಿಡುಗಡೆಯಾದ ಅನುದಾನದ ಮೊತ್ತದಲ್ಲಿ ಖರೀದಿ ಮಾಡಲಾದ ಔಷಧಿಗಳ ಮೌಲ್ಯವು ಈ ಕೆಳಕಂಡಂತಿರುತ್ತದೆ:-

ವರ್ಷ	ಖರೀದಿಸಲಾದ ಔಷಧಿಗಳ ಮೊತ್ತ
1993-94	ರೂ. 22,04,53,532.00
1994-95	ರೂ. 24,27,39,341.00
1995-96	ರೂ. 23,38,08,038.00

ಈ ರೀತಿ ಖರೀದಿ ಮಾಡಲಾದ ಔಷಧಿಗಳಲ್ಲಿ ಕಳಪೆ ಮಟ್ಟದ ಔಷಧಿಗಳನ್ನು ತಿರಸ್ಕರಿಸಿ, ಈ ಬಗ್ಗೆ ಕ್ರಮ ತೆಗೆದುಕೊಂಡಿರುವ ವಿವರವನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಆ) ಬಂದಿದೆ, ಈ ರೀತಿ ಕಳಪೆ ಮಟ್ಟದ ಔಷಧಿಗಳನ್ನು ಸರಬರಾಜು ಮಾಡಿರುವ ಸಂಸ್ಥೆಗಳ ವಿರುದ್ಧ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಇ) ಕಳಪೆ ಮಟ್ಟದ ಔಷಧಿಗಳನ್ನು ಸರಬರಾಜು ಮಾಡಿರುವ ಸಂಸ್ಥೆಗಳ ಹಾಗೂ ಆ ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಂಡಿರುವ ವಿವರವನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕಳಪೆ ಗುಣಮಟ್ಟದ ಔಷಧಿಗಳ ವಿವರಗಳು

ಕ್ರ ಸಂ.	ಕಳಪೆ ಗುಣಮಟ್ಟದ ಔಷಧಿಗಳನ್ನು ಸರಬರಾಜು ಮಾಡಿದ ಸಂಸ್ಥೆಯ ಹೆಸರು	ಕಳಪೆ ಗುಣಮಟ್ಟದ ಔಷಧಿಗಳ ಹೆಸರು	ಪ್ರಮಾಣ	ಮೊತ್ತ ರೂ. ಗಳಲ್ಲಿ	ಕೈಗೊಂಡ ಕ್ರಮಗಳು
		1993-1994			
1.	ಮೆ: ಆನಂದ ಫಾರ್ಮಸಿಟಿಕಲ್, ಮುಧೋಳ.	ವಿಟಮಿನ್ ಬಿ ಕಾಂಪ್ಲೆಕ್ಸ್ ಚುಚ್ಚುಮದ್ದು	34,950 ವಯಲ್ಸ್	1,01,355	ಸದರಿ ಗುತ್ತಿಗೆದಾರರ ನಿಯಮಾನುಸಾರ ವಸೂಲು ಮಾಡಲಾಗುತ್ತಿದೆ.
2.	ತೇಜಪಾಲ್ ಮತ್ತು ಕಂಪನಿ	ಫ್ರಾಮೈಸೀನ್ ಚರ್ಮದ ಮುಲಾಮು	–	36,93,414	ಈ ಕಂಪನಿಯ ವಿರುದ್ಧ ಸಿ.ಓ.ಡಿ. ತನಿಖೆ ನಡೆಯುತ್ತಿದೆ.
		1994-1995			
3.	ದೊಮೆನಿಯನ್ ಕೆಮಿಕಲ್ಸ್	ಫಿನಾಯಿಲ್ ಎಫ್ರಿನ್ 5ಶೇ. (ಕಣ್ಣಿನ ದ್ರಾವಣ)	3,250 ವಯಲ್ಸ್	45,500	ಸದರಿ ಗುತ್ತಿಗೆದಾರರಿಂದ ನಿಯಮಾನುಸಾರ ವಸೂಲು
	– " –	10 ಶೇ. (ಕಣ್ಣಿನ ದ್ರಾವಣ)	1,000 ವಯಲ್ಸ್	19,000	ಮಾಡಲಾಗುತ್ತದೆ.
4.	ಮೆ: ತೇಜ್‌ಪಾಲ್ ಅಂಡ್ ಕಂಪನಿ.	ಡಸ್ಟಿಂಗ್ ಪೌಡರ್	1,100 ಪ್ಯಾಕೇಟ್	20,865	– ಅದೇ –
5.	ಪ್ರಭಾತ್ ಆಥೆಸಿನಿವ್ಸ್	ಆಥೆಸೀವ್ಸ್ ಟೇಪ್	1,930 ರೋಲ್ಸ್	78,744	– ಅದೇ –
6.	ಮೇ: ತೇಜ್‌ಪಾಲ್ ಅಂಡ್ ಕಂಪನಿ.	ಪ್ರೇಮೈಸೀಟಿನ್ (ಚರ್ಮದ ಮುಲಾಮು)	–	21,79,354	ಈ ಕಂಪನಿಯ ವಿರುದ್ಧ ಸಿ.ಓ.ಡಿ. ತನಿಖೆ ನಡೆಯುತ್ತಿದೆ.

1	2	3	4	5	6
7.	ಮೆ: ಕೆ.ಎ.ಪಿ.ಎಲ್, ಬೆಂಗಳೂರು	ಜಂಟಾಮೈಸಿನ್	18,150	96,921	ಸದರಿಯವರಿಂದ ದಿ: 21-4-94 ರಂದು ಈ ಔಷಧಿಗಳ ಬದಲು ಮರುಬದಲಾವಣೆ ಪಡೆಯಲಾಗಿದೆ.
8.	ಮೆ: ತೇಜ್‌ಪಾಲ್ ಅಂಡ್ ಕಂಪನಿ	ನೈಟ್ರೊಫಿರೋಜಿನ್ ಮುಲಾಮು	2,479	49,580	ಸದರಿಯವರಿಂದ ದಿನಾಂಕ 8-11-95 ರಂದು ಮರು ಬದಲಾವಣೆ ಪಡೆಯಲಾಗಿದೆ.
9.	– " –	ಬಿನ್‌ಜಾಯಿಲ್ ಬಿನಭೋಯೇಟ್	661 ಬಾಟಲ್	12,492	ಸದರಿಯವರಿಂದ ದಿನಾಂಕ 24-8-95 ರಂದು ಮರು ಬದಲಾವಣೆ ಪಡೆಯಲಾಗಿದೆ.
10.	ಆನಂದ ಫಾರ್ಮಸಿಟಿಕಲ್ಸ್ ಮುಧೋಳ	ವಾಟರ್‌ಣಫಾರ್ ಇಂಜೆಕ್ಷನ್	74,100 ampoule	49,950	ಸದರಿಯವರಿಂದ ದಿನಾಂಕ 6-12-95 ರಂದು ಮರು ಬದಲಾವಣೆ ಪಡೆಯಲಾಗಿದೆ.
11.	ಹಲ್ಸ್ ಲೈನ್	ಸೋಡಿಯಂ ಲ್ಯಾಕ್ಟೇಟ್ ಇಂಜೆಕ್ಷನ್	5,490 ಬಾಟಲು	54,351	ಸದರಿಯವರಿಂದ ದಿನಾಂಕ 4-11-95ರಂದು ಮರು ಬದಲಾವಣೆ ಪಡೆಯಲಾಗಿದೆ.
12.	ಬಿಂಗಾಲ್ ಇಮ್ಯುನಿಟಿ	ಸೋಡಿಯಂ ಕ್ಲೋರೈಡ್ ಡೆಕ್ಟ್ರೋಸ್ ಸಹಿತ	2,996 ಬಾಟಲು	34,454	ಸದರಿಯವರಿಂದ ನಿಯಮಾನುಸಾರ ವಸೂಲು ಮಾಡಲಾಗುತ್ತದೆ.